ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

43

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ          ದಿನಾಂಕ : DATE : 10/3/2021

# ವಿಧಾನಸಭೆಯಲ್ಲಿಂದು ಪಂಚಮಸಾಲಿ ಚರ್ಚೆ?

## ಸದನದಲ್ಲಿ ನಿನ್ನೆ ಚರ್ಚೆಗೆ ಅವಕಾಶ ಕೋರಿದ ಯತ್ನಾಳ್ | ಇಂದು ಅವಕಾಶ: ಸ್ಪೀಕರ್ ಭರವಸೆ

10/3/21

• **ಕನ್ನಡಪ್ರಭ ವಾರ್ತೆ** ವಿಧಾನಸಭೆ/ವಿಧಾನಸೌಧ

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗಾಗಿ ಹಲವು ದಿನಗಳಿಂದ ಸಮುದಾಯದ ಮಠಾಧೀಶರು, ಮುಖಂಡರು ನಗರದಲ್ಲಿ ಧರಣಿ ನಡೆಸುತ್ತಿರುವ ಬೆನ್ನಲ್ಲೇ ಇದೀಗ ಸದನದಲ್ಲೂ ಸಮುದಾಯದ ಶಾಸಕರು ಮೀಸಲಾತಿ ಪ್ರಸ್ತಾಪ ಎತ್ತಿದ್ದಾರೆ.

ವಿಧಾನಸಭೆಯಲ್ಲಿ ಮಂಗಳವಾರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಈ ವಿಷಯ ಪ್ರಸ್ತಾಪಿಸಿ ಚರ್ಚೆಗೆ ಅವಕಾಶ ಕೋರಿದರು. ಆದರೆ, ಸ್ಪೀಕರ್ ಬುಧವಾರ ಚರ್ಚೆಗೆ ಅವಕಾಶ ನೀಡುವುದಾಗಿ ಭರವಸೆ ನೀಡಿದ್ದರಿಂದ ಸುಮ್ಮನಾದರು.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಯತ್ನಾಳ್, ಪಂಚಮಸಾಲಿ ಸಮುದಾಯ ಕಳೆದ 17 ದಿನಗಳಿಂದ ಮೀಸಲಾತಿಗಾಗಿ ಧರಣಿ ಸತ್ಯಾಗ್ರಹ ನಡೆಸುತ್ತಿದೆ. ಸರ್ಕಾರ ಸಮುದಾಯದ ಬೇಡಿಕೆ ಈಡೇರಿಕೆ ಬಗ್ಗೆ ಯಾವುದೇ ಭರವಸೆ ನೀಡಿಲ್ಲ. ಹಾಗಾಗಿ ಈ ಬಗ್ಗೆ ಸದನದ ಗಮನ ಸೆಳೆದು ಚರ್ಚಿಸಲು ಅವಕಾಶ ನೀಡಬೇಕು. ಈ ಬಗ್ಗೆ ಸ್ಪೀಕರ್ ಅವರಿಗೆ ಮನವಿ ಮಾಡಿದ್ದು, ಅವರು ಬುಧವಾರ ಅವಕಾಶ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ. ಅದರಂತೆ ಅವರು ಅವಕಾಶ ಕೊಟ್ಟಾಗ ಈ ಬಗ್ಗೆ ಸದನದ ಗಮನ ಸೆಳೆಯುತ್ತೇನೆ.

**ಮುಂದುವರೆದಧರಣಿ:** ಈಮಧ್ಯೆ, ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಪಂಚಮಸಾಲಿ ಸಮಾಜದ ಧರಣಿ ಸತ್ಯಾಗ್ರಹ 17 ದಿನ ಪೂರೈಸಿದೆ. ಪ್ರತಿ ದಿನದಂತೆ ಮಂಗಳವಾರವೂ ವಿವಿಧ ಜಿಲ್ಲೆಗಳಿಂದ ಸಮುದಾಯದ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡು ಮಾತನಾಡಿ ಮೀಸಲಾತಿಗಾಗಿ ಆಗ್ರಹ ಮಾಡಿದರು.

ಇದೇ ವೇಳೆ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಸದನದಲ್ಲೂ ಮೀಸಲಾತಿ ವಿಷಯ ಪ್ರಸ್ತಾಪಿಸುವಂತೆ ನಮ್ಮ ಸಮುದಾಯದ ಎಲ್ಲ ಶಾಸಕರಿಗೂ ಮನವಿ ಮಾಡಿಕೊಂಡಿದ್ದಾರೆ.

## ಎದುರಿಗೆ ಸಿಕ್ಕ ಬಿಎಸ್‌ವೈ ಬಳಿ ಮೀಸಲಾತಿ ಕೇಳಿದ ಯತ್ನಾಳ್

ವಿಧಾನಸಭೆ ಮೊಗಸಾಲೆಯಲ್ಲಿ ಮಂಗಳವಾರ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮುಖಾಮುಖಿಯಾದರು. ಈ ವೇಳೆಯೂ ಯತ್ನಾಳ್ ಪಂಚಮಸಾಲಿಗೆ ಮೀಸಲಾತಿ ನೀಡುವಂತೆ ಕೇಳಿದರು. ಆಗ ಯಡಿಯೂರಪ್ಪ ನಗುಮೊಗದಿಂದಲೇ ಯತ್ನಾಳ್ ಅವರ ಭುಜ ತಟ್ಟಿ, ಆಯಿತು ಬಾ ನಾನು ನೀನು ಕುಳಿತು ಮಾತನಾಡೋಣ. ಪಂಚಮಸಾಲಿಗಳಿಗೆ ಮೀಸಲಾತಿ ವಿಚಾರದಲ್ಲಿ ಏನಾಗಬೇಕು ಹೇಳು ಮಾಡೋಣ ಎಂದರು. ಅದಕ್ಕೆ ಯತ್ನಾಳ್ ಮಾತುಕತೆಗೆ ಕರೆದರೆ ಬರೋಕೆ ನಾನು ತಯಾರಾಗಿದ್ದೇನೆ ಎಂದರು.